ಸಾಕ್ಷಿಯನ್ನು ದಿಃ 10-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಸ್ ಎಫ್ ಡಿ ವಕೀಲರಿಂದಃ(ವಾದಿ ಪರವಾಗಿ)**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ವಿಷಯಗಳನ್ನು ನಾನೇ ಹೇಳಿ ಬರೆಯಿಸಿದ್ದು, ಸದರಿ ವಿಷಯಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ಎರಡು ಪಹಣಿಗಳನ್ನು ನಿಪಿಃ1 ಮತ್ತು 2 ಎಂದು, ಮೂರು ಮ್ಯುಟೇಶನ್ ಪ್ರತಿಗಳನ್ನು ನಿಪಿಃ3 ರಿಂದ 5 ಎಂದು, ಎರಡು ಖರೀದಿ ಪತ್ರಗಳ ದೃಢೀಕೃತ ನಕಲುಗಳನ್ನು ನಿಪಿಃ 6 ಮತ್ತು 7 ಎಂದು, ಪಹಣಿ ನಿಪಿಃ8 ಎಂದು, ಮ್ಯುಟೇಶನ್ ಪ್ರತಿ ನಿಪಿಃ9 ಎಂದು, ಭಕ್ಷೀಸ ಪತ್ರದ ಪ್ರತಿ ನಿಪಿಃ10 ಎಂದು ಗುರುತಿಸಿದೆ

ಕಾರಣ ದಾವೆಯಲ್ಲಿ ಕೇಳಿದಂತೆ ಪರಿಹಾರ ನೀಡಲು ವಿನಂತಿಸಿಕೊಳ್ಳುತ್ತೇನೆ.

**(ಪ್ರತಿವಾದಿಯರು ಗೈರು ಹಾಜರಿದ್ದು ಯಾರೂ ಪ್ರತಿನಿಧಿಸದ ಕಾರಣ ನ್ಯಾಯದ ದೃಷ್ಟಿಯಿಂದ ಪಾಟೀ ಸವಾಲಿಗೆ** ಮುಂದೂಡಿದೆ**)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.